

# ಡೇಟಿಂಗ್ ವದಂತಿ ಅಲ್ಲಗಳೆದ ಕಂಗನಾ

ಚಿರಾಗ್ ಪಾಸ್ವಾನ್ ಹಾಗೂ ಕಂಗನಾ ರನೋತ್ ಇಬ್ಬರ ನಡುವೆ ಪ್ರೇಮಾಂಕುರವಾಗಿದೆ ಎಂದು ಹುಯಿಲೆದ್ದಿತ್ತು. ಅದು ಯಾರೋ ಕಿಡಿಗೇಡಿಗಳು ಹಬ್ಬಿಸಿದ ವದಂತಿ ಎಂದು ಖುದ್ದು ಕಂಗನಾ ಸ್ಪಷ್ಟನೆ ನೀಡಿದ್ದಾರೆ.

2011ರಲ್ಲಿ 'ಮಿಲೆ ನಾ ಮಿಲೆ ಹಮ್' ಸಿನಿಮಾದಲ್ಲಿ ಚಿರಾಗ್ ಹಾಗೂ ಕಂಗನಾ ತೆರೆ ಹಂಚಿಕೊಂಡಿದ್ದರು. ಅಲ್ಲಿಂದಲೂ ಇಬ್ಬರೂ ಪರಸ್ಪರ ಸ್ನೇಹಿತರಾಗಿಯೇ ಉಳಿದಿರುವುದಾಗಿ ಕಂಗನಾ ಸ್ಪಷ್ಟಪಡಿಸಿದ್ದಾರೆ.



'ಚಿರಾಗ್ ನನ್ನ ಒಳ್ಳೆಯ ಸ್ನೇಹಿತ. ನಾವಿಬ್ಬರೂ ಮುಕ್ತವಾಗಿ ಮಾತನಾಡುತ್ತೇವೆ. ಆದರೆ, ರೊಮ್ಯಾನ್ಸ್ ಇರುವುದೆಲ್ಲ ಸುಳ್ಳು. ಹಾಗೇನಾದರೂ ಇದ್ದಿದ್ದರೆ ಇಷ್ಟು ಹೊತ್ತಿಗೆ ನಮಗೆ ಮಕ್ಕಳಾಗಿರುತ್ತಿದ್ದವು. ಚಿರಾಗ್ ನೋಡಿದಾಕ್ಷಣ ಒಬ್ಬ ಆತ್ಮೀಯ ಸ್ನೇಹಿತನನ್ನು ಕಂಡಾಗ ಯಾವ ಭಾವನೆ ಮೂಡಬೇಕೋ ಅದಷ್ಟೇ ನನ್ನಲ್ಲಿ ಮೂಡುತ್ತದೆ' ಎನ್ನುವುದು ಕಂಗನಾ ಮಾತು.

ಕಂಗನಾ ಹಾಗೂ ಚಿರಾಗ್ ಒಟ್ಟಾಗಿ ಅನೇಕ ಕಡೆ ಕಾಣಿಸಿಕೊಂಡಾಗ ಕ್ಯಾಮೆರಾ ಕಣ್ಣುಗಳಿಗೆ ಸಿಲುಕಿದರು. ಅದನ್ನು ಕಂಡು ಅನೇಕರು ವದಂತಿ ಹಬ್ಬಿಸಿದ್ದರು. ಇಬ್ಬರೂ ಡೇಟ್ ಮಾಡುತ್ತಿದ್ದಾರೆ ಎಂದು ಬರೆದವರೂ ಇದ್ದಾರೆ. ಈಗ ಕಂಗನಾ ಅವೆಲ್ಲವನ್ನೂ ನಿರಾಕರಿಸಿದ್ದಾರೆ. ಚಿರಾಗ್ ಲೋಕ ಜನಶಕ್ತಿ ಪಕ್ಷದವರು (ರಾಮ್ ವಿಲಾಸ್ ಬಣ). ಕಂಗನಾ ಬಿಜೆಪಿ ಸಂಸದೆ. ಇಬ್ಬರೂ ಅಭಿನಯಲೋಕದಿಂದ ರಾಜಕೀಯ ಮೊಗಸಾಲೆ ಪ್ರವೇಶಿಸಿದರೂ ಸ್ನೇಹ ಮಾತ್ರ ಹಾಗೆಯೇ ಮುಂದುವರಿದಿದೆ. ■





# ಕೃಷಿಕನಾದ ನಟ ಸಾಲಭಾರಕ್ಕೆ ನಲುಗಿದ್ದು...

'ಸಾರಾಭಾಯ್ ವರ್ಸಸ್ ಸಾರಾಭಾಯ್' ಧಾರಾವಾಹಿಯ ಪಾತ್ರದಿಂದಾಗಿ ಜನಪ್ರಿಯರಾಗಿದ್ದ ನಟ ರಾಜೇಶ್ ಕುಮಾರ್ ಕೃಷಿಕರಾಗಲು ಹೋಗಿ ಎರಡು ಕೋಟಿ ರೂಪಾಯಿ ಸಾಲದ ಸುಳಿಯಲ್ಲಿ ಸಿಕ್ಕಿಬಿದ್ದರು. ಈ ಧಾರಾವಾಹಿ 2004ರಿಂದ 2006ರವರೆಗೆ ಪ್ರಸಾರವಾಗಿತ್ತು. ಈಗ ರಾಜೇಶ್ ಮತ್ತೆ ಅಭಿನಯದಲ್ಲಿ ತೊಡಗಿಕೊಂಡಿದ್ದು, ಮುಕ್ಕಾಲು ಭಾಗ ಸಾಲವನ್ನು ತೀರಿಸಿದ್ದಾರೆ.

ರೂಪಾಲಿ ಗಂಗೂಲಿ, ರತ್ನಾ ಪಾಠಕ್ ಶಾ ತರಹದ ಅನುಭವಿ ನಟಿಯರೂ ಇದ್ದ ಧಾರಾವಾಹಿಯಲ್ಲಿ ರಾಜೇಶ್ ಪಾತ್ರವು ಹೆಸರು ತಂದುಕೊಟ್ಟಿತು. ಆಗೀಗ ಅಭಿನಯದ ಅವಕಾಶದಲ್ಲಿ ತೊಡಗಿದ್ದ ಅವರಿಗೆ ಕೋವಿಡ್ ಕಾಲದಲ್ಲಿ ಕೃಷಿ ಕಡೆಗೆ ಹೊರಳುವ ಆಲೋಚನೆ ಬಂತು. 20 ಎಕರೆ ಭೂಮಿಯಲ್ಲಿ ಬೆಳೆದಿದ್ದ ಬೆಳೆಯನ್ನು ಪ್ರವಾಹದ ನೀರು ತೊಳೆದುಹಾಕಿತು. ಭರ್ತಿ ಸಾಲ. ತನ್ನ ಮಗನ ಶಾಲೆಯ ಹೊರಗೆ ತರಕಾರಿ ಮಾರಿ ಜೀವನ ನಡೆಸಬೇಕಾದ ಅನಿವಾರ್ಯ ಪರಿಸ್ಥಿತಿ ಆಗ ಸೃಷ್ಟಿಯಾಯಿತು.

ನಟನೊಬ್ಬನ ಬದುಕು ಹೀಗಾದಾಗ ಹೀಯಾಳಿಸುವ ಮಂದಿ ಕಡಿಮೆ ಇರುವುದಿಲ್ಲ. ಆಗ ಆಟೊ ಹತ್ತಿದಾಗ, 'ಕಾರಿನಲ್ಲಿ ಓಡಾಡಲು ಹಣವಿಲ್ಲ' ಎಂದು ಜನರು ಆಡಿಕೊಂಡರು. ಆಗ ಬದುಕು ಕಲಿಸಿದ ಪಾಠವನ್ನು ಈಗಲೂ ರಾಜೇಶ್ ಮರೆತಿಲ್ಲ.

ಚಿತ್ರೀಕರಣ ಇರುವ ಸಂದರ್ಭದಲ್ಲಿ ಅವರು ಸ್ಥಳೀಯ ರೈಲು, ಮೆಟ್ರೊ ಅಥವಾ ಟ್ಯಾಕ್ಸಿಯಲ್ಲೇ ಪ್ರಯಾಣ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ.

ರಾಜೇಶ್ ಅವರಿಗೆ ಇಬ್ಬರು ಅಕ್ಕಂದಿರು. ಮೊದ ಮೊದಲು ಅವರಲ್ಲಿ ಕಷ್ಟವನ್ನು ಹೇಳಿಕೊಂಡಿರಲಿಲ್ಲ. ಕೋವಿಡ್ ಕಾಲದಲ್ಲಿ ಎಲ್ಲರಲ್ಲೂ ವ್ಯಾಕುಲವಿತ್ತು. ಹೀಗಾಗಿ ಆಗ ಯಾವುದೇ ದಿಢೀರ್ ನಿರ್ಧಾರಕ್ಕೆ ಬರುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ.

ವಿದೇಶಗಳಲ್ಲಿ ಇರುವ ಇಬ್ಬರೂ ಸಹೋದರಿಯರು ಈಗ ರಾಜೇಶ್ ಅವರ ಕೃಷಿ ಭೂಮಿ ನೋಡಿಕೊಳ್ಳಲು ತಂತಮ್ಮ ಕೆಲಸ ತೊರೆದು ಬಂದಿದ್ದಾರೆ. ಜನವರಿಯಲ್ಲಿ ದೊಡ್ಡ ಅಕ್ಕ ಬಂದರು. 50 ವರ್ಷದ ತಮ್ಮನಿಗೆ ಅದೇ ಜನ್ಮದಿನದ ಉಡುಗೊರೆಯಂತೆ ಕಂಡಿತ್ತು. ಆಮೇಲೆ ಚಿಕ್ಕ ಅಕ್ಕ ಕೂಡ ಬಂದರು. ಕೃಷಿ ಭೂಮಿಯ ವಹಿವಾಟನ್ನು ಅವರೀಗ ವಹಿಸಿಕೊಂಡಿದ್ದು, ತಮ್ಮನಿಗೆ ಅಭಿನಯಿಸುವ ಅವಕಾಶ ಬಂದಾಗ ನಗುನಗುತ್ತಾ ಕಳುಹಿಸಿಕೊಡುತ್ತಾರೆ.

ಧಾರಾವಾಹಿಗಳಲ್ಲದೆ 'ಸೂಪರ್ ನಾನಿ', 'ಸ್ಟೂಡೆಂಟ್ ಆಫ್ ದಿ ಇಯರ್', 'ಸಯ್ಯಾರಾ' ಮೊದಲಾದ ಹಿಂದಿ ಸಿನಿಮಾಗಳಲ್ಲಿಯೂ ರಾಜೇಶ್ ಕುಮಾರ್ ಅಭಿನಯಿಸಿದ್ದಾರೆ.

ನಟನೆಯ ಸಹವಾಸ ಸಾಕು ಎಂದು ಕೃಷಿಭೂಮಿಯತ್ತ ಮುಖ ಮಾಡಿದ್ದ ಅವರ ಸಾಲ ಕರಗಲು ಕಿರುತೆರೆ ಹಾಗೂ ಹಿರಿತೆರೆಯ ಅವಕಾಶಗಳೇ ಓಯಸಿಸ್‌ಗಳಂತೆ ಒದಗಿಬಂದಿವೆ. ■